**ಸಾಕ್ಷಿಯನ್ನು ದಿಃ16.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಿಯು ಈ ದಾವೆಯನ್ನು ಜಮೀನು ಅವರಿಗೆ ಸೇರಬೇಕು ಎಂದು ಹಾಕಿದ್ದರೆ. ಶಿವಣ್ಣ, ಬೋರೇಗೌಡ ಹಾಗೂ ರಘು ರವರ ಮೇಲೆ ಹಾಕಿದ್ದಾರೆ. ಸ.ನಂ.94/ಪಿ11 ರಲ್ಲಿ 2 ಎಕರೆ ಮೇಲೆ ಹಾಕಿದ್ದಾದರೆ. ಸದರಿ ಸರ್ವೆ ನಂಬರ್ ನಲ್ಲಿ ವಾದಿಗೆ 2 ಎಕರೆ, 1 ಎಕರೆ ಬೊರೇಗೌಡ ಹಾಗೂ 1 ಎಕರೆ ಶಿವಣ್ಣನಿಗೆ ಜಮೀನು ಇದೆ.

2. 2 ಎಕರೆ ವಾದಿಗೆ ಹೇಗೆ ಬಂದಿತು ಎಂದರೆ, ಅವರ ಪತಿ ಮೊಗಣ್ಣೇಗೌಡ ಮಾಡಿಸಿಕೊಟ್ಟಿದ್ದಾರೆ. ಯಾವ ಪತ್ರ ಎಂದು ನನಗೆ ಗೊತ್ತಿಲ್ಲ. 2 ಎಕರೆಗೆ ಚಕ್ಕುಬಂದಿ ಗೊತ್ತು. ಪೂರ್ವಕ್ಕೆಃ ಶಿವಣ್ಣೇಗೌಡ ಹಾಗೂ ರುಕ್ಮಿಣಮ್ಮ. ಪಶ್ಚಿಮಕ್ಕೆಃ ಕಾಳಮ್ಮ, ಉತ್ತರಕ್ಕೆಃ ಹಾರಂಗಿ ಕಾಲುವೆ, ದಕ್ಷಿಣಕ್ಕೆಃ ರಾಮೇಗೌಡ ಕರಿಗೌಡ. ಸದರಿ ಜಮೀನು ಶಿವಣ್ಣೇಗೌಡ ಹಾಗೂ ಬೋರೇಗೌಡರ ಸ್ವಾಧೀನದಲ್ಲಿ ಇದೆ. ಸದರಿ ಜಮೀನು ತನಗೆ ಸೇರಬೇಕು ಎಂದು ವಾದಿ ದಾವೆ ಹಾಕಿದ್ದಾರೆ.

3. ವಾದಿಯ 2 ಎಕರೆ ಜಮೀನಿನಲ್ಲಿ ಅವರೇ ಸ್ವಾಧೀನದಲ್ಲಿದ್ದಾರೆ. ಅವರ ಚಕ್ಕುಬಂದಿ ಗೊತ್ತು.

4. ಶಿವೇಗೌಡರ 1 ಎಕರೆಯ ಪೂರ್ವಕ್ಕೆಃ ರುಕ್ಮಿಣಮ್ಮ. ಪಶ್ಚಿಮಕ್ಕೆಃ ಕಾಳಮ್ಮ, ಉತ್ತರಕ್ಕೆಃ ಹಾರಂಗಿ ಕಾಲುವೆ, ದಕ್ಷಿಣಕ್ಕೆಃ ರಾಮೇಗೌಡ ಕರಿಗೌಡ. ಶಿವೇಗೌಡರ ಅಡಿಕೆ ತೋಟ ಇದೆ.

5. ಬೋರೇಗೌಡರ 1 ಎಕರೆಯ ಪೂರ್ವಕ್ಕೆಃ ರುಕ್ಮಿಣಮ್ಮ. ಪಶ್ಚಿಮಕ್ಕೆಃ ಕಾಳಮ್ಮ, ಉತ್ತರಕ್ಕೆಃ ಹಾರಂಗಿ ಕಾಲುವೆ, ದಕ್ಷಿಣಕ್ಕೆಃ ರಾಮೇಗೌಡ ಕರಿಗೌಡ. ಬೋರೇಗೌಡರದು ಜಮೀನು ಇದೆ.

6. ನಿರ್ಥಿಷ್ಟವಾಗಿ 4 ಎಕರೆಯಲ್ಲಿ ಯಾರು ಯಾರು ಯಾವ ಚಕ್ಕುಬಂದಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ಗೊತ್ತು. ನಿಮಗೆ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ಸ.ನಂ.94 ರಲ್ಲಿ ನನಗೆ ಜಮೀನು ಇಲ್ಲ. ಸ.ನಂ.96 ರಲ್ಲಿ 3 ಎಕರೆ ನನ್ನ ತಂದೆ ಜವರೇಗೌಡರ ಹೆಸರಿನಲ್ಲಿ ಇದೆ.

8. ಸ.ನಂ.94 ರಲ್ಲಿ ಒಟ್ಟು ಎಷ್ಟು ಪೋಡುಗಳು ಇವೆ ಯಾವ ಯಾವ ಪೋಡಿನಲ್ಲಿ ಯಾರು ಯಾರು ಯಾವ ಯಾವ ಚಕ್ಕುಬಂದಿಯಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ.

9. ವಾದಿಯ 2 ಎಕರೆಯಲ್ಲಿ ಮೊದಲಿಂದಲೂ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಅವರ ಚಕ್ಕುಬಂದಿ ಪೂರ್ವಕ್ಕೆ: ಜವರೇಗೌಡರ ಜಮೀನು ಎಂದರೆ ಜವರೇಗೌಡ ಎಂದರೆ ನಮ್ಮ ತಂದೆ. ಪಶ್ಚಿಮಕ್ಕೆ: ಕಾಳಮ್ಮ ಎಂದರೆ ಸರಿ. ಉತ್ತರಕ್ಕೆ: ಪ್ರತಿವಾಗಳ ಒಂದೊಂದು ಎಕರೆ ಜಮೀನು ಎಂದರೆ ಸರಿ. ದಕ್ಷಿಣಕ್ಕೆ ಹಾರಂಗಿ ನಾಲೆ ಎಂದರೆ ಸರಿ. ಸದರಿ ಚಕ್ಕುಬಂದಿಯಲ್ಲಿ ವಾದಿಯ ಪತಿಯ ಹೆಸರಿನಲ್ಲಿ ಇರುವಾಗಿನಿಂದಲೂ ಅವರೇ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

10. ಪೂರ್ವಕ್ಕೆ ಇರುವ ಜವರೇಗೌಡ ಎಂದರೆ ನಿಮ್ಮ ತಂದೆ ಎಂದರೆ, ಸರಿ ಆದರೆ ಪೂರ್ವಕ್ಕೆ ಜವರೇಗೌಡರು ಬರುವುದಿಲ್ಲ. ವಾದಿಯ ಪೂರ್ವಕ್ಕೆ: ಶಿವಣ್ಣ ರವರ ಜಮೀನು ಇದೆ.

11. ನಮ್ಮ ಸ.ನಂ.94/6 ರ ಜಮೀನು ವಾದಿಯ ಜಮೀನಿನ ಅಕ್ಕಪಕ್ಕ ಬರುವುದಿಲ್ಲ. ನಮಗೆ ಹಾಗೂ ಅವರಿಗೆ ಅರ್ಧ ಕಿ.ಮೀ ದೂರ ಇದೆ.

12. ಪ್ರತಿವಾದಿಗಳು ವಾದಿಯ 2 ಎಕರೆ ಜಮೀನಿಗೆ ತೊಂದರೆ ಕೊಟ್ಟಿದ್ದರು ಎಂದರೆ ಸರಿಯಲ್ಲ.

13. ವಾದಿ, ಬೋರೇಗೌಡ ಹಾಗೂ ಶಿವೇಗೌಡರಿಗೆ ಎಂ.ಆರ್ ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ವಕೀಲರಿಗೆ ಹೇಳಿ ಬರೆಸಿಲ್ಲ.

14. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ.

15. ಪ್ರತಿವಾದಿಗಳ ಮಾತು ಕೇಳಿ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

16. ಪ್ರತಿವಾದಿಗಳು ವಾದಿಯ 2 ಎಕರೆ ಜಮೀನಿಗೆ ತೊಂದರೆ ಕೊಟ್ಟಿದ್ದ ಕಾರಣ ವಾದಿ ಈ ದಾವೆ ಹಾಕಿದ್ದು, ವಾದಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ